ತಾರೀಖು 1ನೇ ಏಪ್ರಿಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು ಸ್ಥಳದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಅಧಿಸರಿಂದಾಗಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ತಾಲ್ಲೂಕುಗಳ ಮತ್ತು ಸ್ಟೇಟ್ ಫಾರೆಸ್ಟುಗಳ ಹೆಸರು	ಹರಾಜು ತಾರೀಖು.	ಹರಾಜು ಸ್ಥಳ.
1	ಮೊಳಕಾಲ್ಮುರು ತಾಲ್ಲೂಕು ..	23—5—1903	ಮೊಳಕಾಲ್ಮುರು ತಾಲ್ಲೂಕು ಕಚೇರಿ
2	ಹೊಳಲಕೆರೆ ತಾಲ್ಲೂಕು ...	29—5—1903	ಹೊಳಲಕೆರೆ ತಾಲ್ಲೂಕು ಕಚೇರಿ
3	ಗರಗಾ ಕಾವಲು ..		
4	ಹೊಸದುರ್ಗದ ತಾಲ್ಲೂಕು ...	30—5—1903	ಹೊಸದುರ್ಗ ತಾಲ್ಲೂಕು ಕಚೇರಿ
5	ದಾವಣಗೆರೆ ತಾಲ್ಲೂಕು ..	2—6—1903	ದಾವಣಗೆರೆ ತಾಲ್ಲೂಕು ಕಚೇರಿ
6	ಹರಿಹರ ತಾಲ್ಲೂಕು ..	3—6—1903	ಹರಿಹರ ಸಬ್ ತಾಲ್ಲೂಕು ಕಚೇರಿ

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟಿಗೆ ಹರಾಜು ಶುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮೂರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನು ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1903ನೇ ಸಾಲ್ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ತಾರೀಖು 30ರ ವರಿಗಿನ 12 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣಿ ಬಗ್ಗೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 50 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನು ಹರಾಜು ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರ ಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟುಇದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲು ಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಅಧಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರ ಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಕೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಬಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ 15 ದಿನಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತದೆ.

7. ಬಾಕಿ ಉಳಿಯುವ ಮೊಬಲಗನ್ನು 1903ನೇ ಇಸವಿ ಜೂನ್ ಆಖೈರ್ ಒಳಗಾಗಿ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಇಜಾರೆದಾರನು ಮೊದಲು ಇಟ್ಟು ಇದ್ದ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಳ್ಳುವದಲ್ಲದೆ ಇಜಾರೇ ಹಕ್ಕಿನ ಬಾಧ್ಯತೆ ಹೋಗಲಾಡಿಸಿಕೊಳ್ಳುವದಲ್ಲದೆ, ಬಾಬು ದುಸರಾ ಹರಾಜಿಗೆ ಒಳಪಡಿಸಲ್ಪಡುವದು. ಈ ಲಾಗಾಯಿತು ಸೆಸ್ಸು ವಸೂಲು ಮಾಡುವದಿಲ್ಲ.

ಷ ರ ತ್ತು ಗ ಳು .

1. ಬಂದು ವರುಷಕ್ಕೆ ಮೇಲ್ಪಟ್ಟು ದೊಡ್ಡದಾದ ಯಾ ಸಂಣದಾದ ಎಲ್ಲಾ ಗಿಡಗಳನ್ನ ನೆಲಮಟ್ಟಕ್ಕೆ ಕಡಿಯತಕ್ಕದ್ದು.

2. ಬಂದು ವರುಷಕ್ಕೆ ಒಳಪಟ್ಟ ಎಳೇಗಿಡಗಳನ್ನು ಇಜಾರೆದಾರನ ನವಕರರಾಗಲಿ ಅಥವಾ ಆತನ ಷಿಕಿಮಿ ಕಂಟ್ರಾಕ್ಟ್ದಾರರಾಗಲಿ ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.

3. ಕೆಲಸ ನಡಿಸಲು ವಿಂಗಡಿಸಲ್ಪಡುವ ಪ್ರತಿ ಬಂದು ಸರ್ಕಲಿನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಿಮಿ ಕಂಟ್ರಾಕ್ಟುದಾರರುಗಳ ಹೆಸರಿನ ಬಂದು ಲೀಸ್ಸು ಕೊಡತಕ್ಕದ್ದು. ಮತ್ತು ಚಕ್ಕೆ ದಾಸ್ತಾನುಮಾಡುವ ಕೋಠಿ ಸಹ ನಮೂದಿಸಬೇಕು.

4. ತೊಖಟೆ ತೆಗದನಂತರ ಆ ಸಮ್ಬಂಧವಾದ ವಿಷಯ್ಯ ಸಾದೆಯು ಇಜಾರೆದಾರನಿಗೆ ಸೇರಿದ್ದಾಗಿ ಇರುತ್ತದೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಜಮಾವಣಿ ಆದಬಗ್ಯೆ ತಪಶೀಲ್ ಲೆಕ್ಕ ಇಡತಕ್ಕದ್ದಲ್ಲದೆ ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮ್ಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಯಾವ ಆಫಿಸರರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಕ್ಕಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡು ಹೋಗುವ ಪ್ರತಿ ಬಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡಿಯತಕ್ಕದ್ದು.

7. ಇಜಾರೆಗೆ ಸಂಬಂಧಪಟ್ಟ ವಿಸಿಪಟ್ಟ ಚಕ್ಕೆಯನ್ನು 1904ನೇ ಇಸವಿ ಜೂ ಆಖ್ಯೆರ ಒಳಗಾಗಿ ಜಮಾಯಿಸಿ ದಾಸ್ತಾನು ಇಟ್ಟುಇದ್ದ ಕೋಠಿಗಳ ಯಾ ರೈಲ್ವೆ ಸ್ಟೇಷನ್ನುಗಳಲ್ಲಿನ ಚೆಕ್ಕೆಯನ್ನು ಡಿಸ್ಟ್ರಿಕ್ಟು ಸರಹದ್ದು ಹೊರಕ್ಕೆ ತೆಗದು ಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಬಂದು ಪರತ್ತಿಗಾದರೂ ತಪ್ಪು ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಪಟ್ಟವೂ ಸರಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡತಕ್ಕದ್ದು. ಮತ್ತು ಇಜಾರೆದಾರನು ಡೆಪ್ಯುಟಿ ಕಮಿಷ್ಣರ್ ಸಾಹೇಬರವರಿಂದ 1,000 ಬಂದು ಸಾವಿರ ರೂಪಾಯಿವರಿಗೆ ಜುರ್ಮಾನೆ ವಿಧಿಸಲ್ಪಡುವದಕ್ಕೆ ಬದ್ದನಾಗಿರುತ್ತಾನೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ನೋಟೀಸು.

ತಾರೀಖು 23ನೇ ಏಪ್ರಿಲ್ 1903ನೇ ಇಸವಿ.

ಸ್ಯ 1895ನೇ ಇಸವಿ ಮಾರ್ಚಿ 11ನೇ ಮಾರ್ಕ್ಕಂ 14523—30 R. F. 157-93ನೇ ನಂಬರ್ ಗವರ್ನ್‌ಮೆಂಟು ಪ್ರೊಸೀಡಿಂಗ್ಸು ಅನುಸರಿಸಿ ಈ ಕೆಳಗೆ ಕಂಡ ಗ್ರಾಮುಗಳ ಬಗ್ಯೆ ಸಿದ್ಧಾರ್ಥಿ ಮತ್ತು ದುಂದುಭಿ ಸಂವತ್ಸರಗಳ ಬ್ರಾಹತು ಕುಳವಾರಿ ಚಿಟ್ಟಿಗಳನ್ನು 1903ನೇ ಇಸವಿ ಆಗಸ್ಟು ಮಾಹೆ 31ನೇ ತಾರೀಖಿನಲ್ಲಿ ನಾಶ ಮಾಡಲ್ಪಡುತ್ತೆ. ಇದರ ನಕಲನ್ನು ಪಡಿಯಲು ಆಪೇಕ್ಷೆ ಪುಳ್ಳವರು ಮೇಲ್ಕಂಡ ತಾರೀಖಿನ ಒಳಗಾಗಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿ ಕ್ರಮವಾಗಿ ದರಖಾಸ್ತು ಕೊಟ್ಟು ಕಾಪಿ ಪಡಿಯಬಹುದು :—

ತಾಲ್ಲೂಕು.	ಹೋಬಳಿ.	ಗ್ರಾಮದ ಹೆಸರು.
ಕೋಲಾರ ..	ಹೋಳೂರು ..	1 ಐತರನನಹಳ್ಳಿ
ಶ್ರೀನಿವಾಸಪುರ	ಶ್ರೀನಿವಾಸಪುರ ..	2 ಹೆಬ್ಬಟ
ಗುಮ್ಮನಾಯಕನಪಾಳ್ಯ ..	ಚೇಳೂರು ..	3 ಚಿನ್ನಮಂಡೆಂಪಲ್ಲಿ
		4 ಪೆಮ್ಮಯ್ಯಗಾರಿಪಲ್ಲಿ
		5 ಷೇರುಖಾನ್‌ಕೋಟೆ
	ಗುಟ್ಟಪಾಳ್ಯ ..	6 ಬೋಯಿನವಾರಿಪಲ್ಲಿ
		7 ಬಳಕನಪಲ್ಲಿ
		8 ಮುರವೆಹಳ್ಳಿ
		9 ರಾಜುಗುಂಡ್ಲಪಲ್ಲಿ
		10 ಮುಗುವನಹಳ್ಳಿ
		11 ಭೀಮನವಡ್ಡು
		12 ನಾಚಿಗುಂಡ್ಲಪಲ್ಲಿ
		13 ಕಂಬದಿನ್ನೆ
		14 ಕಾನಗಲದಿನ್ನೆ
		15 ಹೊನ್ನಿಕೆರೆ
		16 ವಿಕಟಕವಿ ಹೊಸಹಳ್ಳಿ
		17 ವಡೆಹಳ್ಳಿ